## ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 868 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16.12.2024 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಂಬ್ಯುಲೆನ್ಸ್ ಅಪಘಾತಗಳ ಸಂಖ್ಯೆ ಎಷ್ಟು; ಸದರಿ ಆಂಬ್ಯುಲೆನ್ಸ್ ಅಪಘಾತಗಳಲ್ಲಿ ಪ್ರಾಣಹಾನಿಯಾದ ಗಾಯಗೊಂಡ ಪ್ರಕರಣಗಳು ಎಷ್ಟು; ಆಂಬ್ಯುಲೆನ್ಸ್ ಅಪಘಾತಗಳಲ್ಲಿ ಪ್ರಾಣಹಾನಿಯಾದ ಮತ್ತು ಗಾಯಗೊಂಡ ರೋಗಿಗಳಿಗೆ ಪರಿಹಾರ ಧನ ನೀಡಲಾಗಿದೆಯೇ; ಬಾಕಿಯಿರುವ ಪರಿಹಾರ ಧನ ನೀಡಲು ಯಾವಾಗ ಕ್ರಮವಹಿಸಲಾಗುವುದು.</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಂಬ್ಯುಲೆನ್ಸ್ ಅಪಘಾತಗಳ ವಿವರ ಈ ಕೆಳಕಂಡಂತೆ ಇರುತ್ತದೆ.<br><br>
<table>
<tr><th>ಕ್ರ.ಸಂ.</th><th>ಆಂಬ್ಯುಲೆನ್ಸ್ ಅಪಘಾತವಾಗಿರುವ ಸಂಖ್ಯೆ</th><th>ಗಾಯಗೊಂಡ ಪ್ರಕರಣಗಳ ಸಂಖ್ಯೆ</th><th>ಪ್ರಾಣಹಾನಿಯಾದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>42</td><td>9</td><td>17</td></tr>
</table>
<br>108-ಆರೋಗ್ಯ ಕವಚ ಸೇವಾದಾರರು ಆಂಬ್ಯುಲೆನ್ಸ್‌ಗಳ ವಿಮೆಯನ್ನು ಕೆ.ಜಿ.ಐ.ಡಿ ವಿಮೆ ಸಂಸ್ಥೆಯಿಂದ ಪಡೆಯಲಾಗಿದ್ದು ಅಪಘಾತದಲ್ಲಿ ಪ್ರಾಣಹಾನಿ ಮತ್ತು ಗಾಯಗೊಂಡ ರೋಗಿಗಳು ನ್ಯಾಯಾಲಯದ ಮೂಲಕ ದಾವೆಯನ್ನು ಹೂಡಿಕೊಂಡು ನ್ಯಾಯಾಲಯದ ತೀರ್ಮಾನದಂತೆ ಪರಿಹಾರವನ್ನು ಕೆ.ಜಿ.ಐ.ಡಿ ಸಂಸ್ಥೆಯಿಂದ ಪಡೆದುಕೊಳ್ಳಬೇಕಾಗಿದೆ.</td></tr>
<tr><td>ಆ)</td><td>ಆಂಬ್ಯುಲೆನ್ಸ್ ಅಪಘಾತಗಳಿಗೆ ಕಾರಣಗಳೇನು; ಈ ಕುರಿತು ಎಷ್ಟು ದೂರುಗಳು ದಾಖಲಾಗಿದೆ; ಆಂಬ್ಯುಲೆನ್ಸ್ ಸೇವೆಗಳಿಗೆ ವರ್ತಮಾನ ಕಾಲಕ್ಕೆ ಅನುಗುಣವಾಗಿ ಅಗತ್ಯವಿರುವ ನಿಯಮಗಳನ್ನು ರೂಪಿಸಲಾಗಿದೆಯೇ; ಇಲ್ಲದಿದ್ದರೆ ಯಾವಾಗ ನಿಯಮಗಳನ್ನು ರೂಪಿಸಲಾಗುವುದು.</td><td>ಆಂಬ್ಯುಲೆನ್ಸ್ ಅಪಘಾತಗಳು ಈ ಕೆಳಕಂಡ ಪ್ರಮುಖ ಕಾರಣಗಳಿಂದ ಉಂಟಾಗುತ್ತದೆ.<br>108-ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳ ಮೂಲಕ ತುರ್ತು ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದ್ದು, ರೋಗಿಯನ್ನು ಆಸ್ಪತ್ರೆಗೆ ರವಾನಿಸುವ ಹಿನ್ನಲೆಯಲ್ಲಿ ವೇಗವಾಗಿ ಚಾಲನೆ ಮಾಡುವುದರಿಂದ ಕೆಲವು ಸಂದರ್ಭಗಳಲ್ಲಿ ಆಂಬ್ಯುಲೆನ್ಸ್‌ಗಳು ಅಪಘಾತಕ್ಕೀಡಾಗುತ್ತದೆ.<br>• ಎದುರಾಳಿ ವಾಹನಗಳ ತಪ್ಪಿನಿಂದ ಅಪಘಾತಗಳು ಈಡಾಗುತ್ತವೆ.<br>• ಕೆಲವು ಸಂದರ್ಭದಲ್ಲಿ ಮಂಜಿನ ಪರಿಸ್ಥಿತಿಯಲ್ಲಿ ಚಾಲನೆ ಮಾಡುತ್ತಿರುವಾಗ ಅಘಘಾತಕ್ಕೀಡಾಗುತ್ತದೆ.<br>• ಕೆಲವೊಮ್ಮೆ ಆಂಬ್ಯುಲೆನ್ಸ್‌ಗಳ ತಾಂತ್ರಿಕ ದೋಷದಿಂದ ಅಪಘಾತಕ್ಕೆ ಒಳಗಾಗುತ್ತವೆ.<br>• ಕೆಲವೊಮ್ಮೆ ಆಂಬ್ಯುಲೆನ್ಸ್ ವಾಹನ ಚಾಲಕರ ಅಸುರಕ್ಷತೆ ಚಾಲನೆ / ನಿರ್ಲಕ್ಷತೆಯಿಂದಾಗಿ ಆಂಬ್ಯುಲೆನ್ಸ್‌ಗಳು ಅಘಘಾತಕ್ಕೀಡಾಗುತ್ತವೆ.</td></tr>
</table>

| | | |
|---|---|---|
| | | **ಆಂಬ್ಯುಲೆನ್ಸ್ ಸೇವೆಗಳಿಗೆ ವರ್ತಮಾನ ಕಾಲಕ್ಕೆ ಅನುಗುಣವಾಗಿ ಅಗತ್ಯವಿರುವ ನಿಯಮಗಳನ್ನು ರೂಪಿಸಲಾಗಿದೆ.**<br>• ಪ್ರಸ್ತುತ ಆಂಬ್ಯುಲೆನ್ಸ್ ವಾಹನ ಚಾಲಕರಿಗೆ ಸುರಕ್ಷಿತವಾಗಿ ಆಂಬ್ಯುಲೆನ್ಸ್ ಚಾಲನೆ ಮಾಡುವ ಕೌಶಲ್ಯ ತರಬೇತಿಯನ್ನು ಕೆಲಸಕ್ಕೆ ಸೇರಿದ ಕೂಡಲೇ ನೀಡಲಾಗುವುದು ಹಾಗೂ ಪ್ರತಿ 06 ತಿಂಗಳಿಗೊಮ್ಮೆ Refresher ತರಬೇತಿಯನ್ನು ಹಾಗೂ ಅವಶ್ಯಕವಿದ್ದ ಸಂದರ್ಭದಲ್ಲಿ ವಾಹನ ಚಾಲಕರಿಗೆ ಆಪ್ತ ಸಮಾಲೋಚನೆಯನ್ನು ನಡೆಸಲಾಗುತ್ತದೆ.<br><br>ಒಂದು ವೇಳೆ ಚಾಲಕರು ತಮ್ಮ ಬೇಜಬ್ದಾರಿತನದಿಂದ ಆಂಬ್ಯುಲೆನ್ಸ್‌ಗಳಿಗೆ ಅಪಘಾತವಾದಲ್ಲಿ ಇ.ಎಂ.ಆರ್.ಐ ಗ್ರೀನ್ ಹೆಲ್ತ್ ಸಂಸ್ಥೆಯವರ ನಿಯಮಾವಳಿಯನುಸಾರ ಸೂಕ್ತ ಶಿಸ್ತಿನ ಕ್ರಮವನ್ನು ಜರುಗಿಸಲಾಗುತ್ತದೆ. |
| ಇ) | ಆರೋಗ್ಯ ಇಲಾಖೆಯ ಆಂಬ್ಯುಲೆನ್ಸ್ ಚಾಲಕರು ಹಾಗೂ ಸಿಬ್ಬಂದಿಗಳಿಗೆ ಪ್ರಸ್ತುತ ಎಷ್ಟು ಅವಧಿಯವರೆಗೆ ವೇತನ ಪಾವತಿ ಬಾಕಿಯಿದೆ; ಯಾವಾಗ ಪಾವತಿಸಲಾಗುವುದು. | 108-ಆರೋಗ್ಯ ಕವಚ ತುರ್ತು ಆರೋಗ್ಯ ಸೇವೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇ.ಎಂ.ಟಿ ಮತ್ತು ಪೈಲೆಟ್‌ಗಳಿಗೆ ಅಕ್ಟೋಬರ್-2024 ಮತ್ತು ನವೆಂಬರ್-2024 ರ ಸಂಬಳವು ಬಾಕಿ ಇದ್ದು ಶೀಘ್ರದಲ್ಲೇ ಬಾಕಿ ವೇತನವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ. |
| ಈ) | ಈಗಾಗಲೇ ಆಗಿರುವ ಆಂಬ್ಯುಲೆನ್ಸ್ ಅಪಘಾತಗಳ ಕಾರಣಗಳನ್ನು ಗುರುತಿಸಿಕೊಂಡು ಮುಂದಿನ ದಿನಗಳಲ್ಲಿ ಈ ಆಂಬ್ಯುಲೆನ್ಸ್ ಅಪಘಾತಗಳನ್ನು ಶೂನ್ಯ ಸಂಖ್ಯೆಗೆ ಇಳಿಸುವ ನಿಟ್ಟಿನಲ್ಲಿ ಏನೇನು ಸುಧಾರಣಾ ಕ್ರಮಗಳನ್ನು ಹಾಗೂ ಮುಂಜಾಗ್ರತೆ ಕ್ರಮಗಳನ್ನು ವಹಿಸಲಾಗಿದೆ; ಈ ಕುರಿತು ಆರೋಗ್ಯ ಇಲಾಖೆ ಆಂಬ್ಯುಲೆನ್ಸ್ ಚಾಲಕರು ಹಾಗೂ ಸಿಬ್ಬಂದಿಗಳಿಗೆ ಸೂಚನೆ ನೀಡಲಾಗಿದೆಯೇ? | 108-ಆರೋಗ್ಯ ಕವಚ ಆಂಬ್ಯುಲೆನ್ಸ್ ಅಪಘಾತಗಳ ಕಾರಣಗಳನ್ನು ಗುರುತಿಸಿಕೊಂಡು ಮುಂದಿನ ತಿಂಗಳಗಳಲ್ಲಿ ಈ ಆಂಬ್ಯುಲೆನ್ಸ್ ಅಪಘಾತಗಳನ್ನು ಶೂನ್ಯ ಸಂಖ್ಯೆಗೆ ಇಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಹಾಗೂ ಮುಂಜಾಗ್ರುತಾ ಕ್ರಮಗಳನ್ನು ವಹಿಸಲಾಗಿದೆ.<br>• ಪ್ರಸ್ತುತ ಆಂಬ್ಯುಲೆನ್ಸ್ ವಾಹನ ಚಾಲಕರಿಗೆ ಸುರಕ್ಷಿತವಾಗಿ ಆಂಬ್ಯುಲೆನ್ಸ್ ಚಾಲನೆ ಮಾಡುವ ಕೌಶಲ್ಯ ತರಬೇತಿಯನ್ನು ಕೆಲಸಕ್ಕೆ ಸೇರಿದ ಕೂಡಲೇ ನೀಡಲಾಗುವುದು ಹಾಗೂ ಪ್ರತಿ 06 ತಿಂಗಳಿಗೊಮ್ಮೆ Refresher ತರಬೇತಿಯನ್ನು ಹಾಗೂ ಅವಶ್ಯಕವಿದ್ದ ಸಂದರ್ಭದಲ್ಲಿ ವಾಹನ ಚಾಲಕರಿಗೆ ಆಪ್ತ ಸಮಾಲೋಚನೆಯನ್ನು ನಡೆಸಲಾಗುತ್ತದೆ.<br>• ಒಂದು ವೇಳೆ ಚಾಲಕರು ತಮ್ಮ ಬೇಜಬ್ದಾರಿತನದಿಂದ ಆಂಬ್ಯುಲೆನ್ಸ್‌ಗಳಿಗೆ ಅಪಘಾತವಾದಲ್ಲಿ ಇ.ಎಂ.ಆರ್.ಐ ಗ್ರೀನ್ ಹೆಲ್ತ್ ಸಂಸ್ಥೆಯವರ ನಿಯಮವಳಿನುಸಾರ ಸೂಕ್ತ ಶಿಸ್ತಿನ ಕ್ರಮವನ್ನು ಜರುಗಿಸಲಾಗುತ್ತದೆ.<br><br>ಅಪಘಾತ ಪ್ರಕರಣದ ಕುರಿತಾಗಿ ಆಗಿಂದಾಗ್ಗೆ ಸಭೆಗಳನ್ನು ಕರೆದು ಪರಿಶೀಲಿಸಿ ಅಪಘಾತಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅವಶ್ಯಕ ನಿರ್ದೇಶನಗಳು, ಸುತ್ತೋಲೆಗಳನ್ನು ವಾಹನ ಚಾಲಕರಿಗೆ ನೀಡಲಾಗುತ್ತಿದೆ. |

**ಕಡತ ಸಂಖ್ಯೆ: ಆಕುಕ136 ಎಸ್.ಬಿ.ವಿ. 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**